8. ಪ್ರಕಟಣೆ.

ಮಾನ್ಯ ಉಪಾಧ್ಯಕ್ಷರು:

ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸಿದಂತೆ ಈ ದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಕೃಷಿ, ತೋಟಗಾರಿಕೆ, ಪಶುಸಂಗೋಪನ, ಸಕ್ಕರೆ, ಮೀನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ, ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಬೇಡಿಕೆಗಳ ಮೇಲೆ ಮಧ್ಯಾಹ್ನ 3-30ರವರೆಗೆ ಚರ್ಚೆ ನಡೆಯಲಿದ್ದು, ದಿನಾಂಕ 2ನೇ ಮೇ ಮಂಗಳವಾರದಂದು ಸರ್ಕಾರದ ಉತ್ತರ ಹಾಗೂ ಸದರಿ ಬೇಡಿಕೆಗಳನ್ನು ಮತಕ್ಕೆ ಹಾಕಲಾಗುವುದು.

ದಿನಾಂಕ 2ನೇ ಮೇ 2000ದ ಮಂಗಳವಾರದಿಂದ ಪ್ರತಿದಿನ ಸದನವು ಬೆಳಿಗ್ಗೆ 9-30 ಘಂಟೆಯಿಂದ ಸಂಜೆ 7-00 ಘಂಟೆಯವರೆಗೆ ನಿರಂತರವಾಗಿ ಕಾರ್ಯಕಲಾಪಗಳನ್ನು ನಡೆಸಲಿದೆ ಹಾಗೂ ಈ ಅವಧಿಯಲ್ಲಿ ಪ್ರಶ್ನೋತ್ತರ ಕಾಲವು (ತಡೆಹಿಡಿದ ಪ್ರಶ್ನೆಗಳು ಸೇರಿದಂತೆ) ಒಂದೂವರೆ ಘಂಟೆಗಳ ಕಾಲ ನಡೆಯಲಿದೆ.

ಇದನ್ನು ಸದನವು ಒಪ್ಪಿದೆಯೆಂದು ಭಾವಿಸುತ್ತೇನೆ.